ಸಂಖ್ಯೆ: 2517

ಶ್ರೀ ವಿ. ಸೋಮಣ್ಣ

ಇಕ್ಬಾಲ್ ಅನ್ಸಾರಿ(ವೈದ್ಯಕೀಯ ಶಿಕ್ಷಣ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಬೆಂಗಳೂರಿನ ವಿಕ್ಟೋರಿಯಾ ಹಾಗೂ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಿಗೆ ಪ್ರತಿದಿನ ಬರ ತಕ್ಕ ಹೊರ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು;	**ವಿಕ್ಟೋರಿಯಾ ಆಸ್ಪತ್ರೆ:** ಸರಾಸರಿ 50 ಒಳರೋಗಿಗಳು ಹಾಗೂ 950 ಹೊರರೋಗಿಗಳೂ. **ಬೌರಿಂಗ್ ಆಸ್ಪತ್ರೆ:** ಸರಾಸರಿ 100 ಒಳರೋಗಿಗಳು ಹಾಗೂ 900 ಹೊರರೋಗಿಗಳು
(ಆ)	ಈ ಆಸ್ಪತ್ರೆಗಳಲ್ಲಿರುವ ಹಾಸಿಗೆ ಪ್ರಮಾಣವೆಷ್ಟು ;	**ವಿಕ್ಟೋರಿಯಾ ಆಸ್ಪತ್ರೆ:** 764 ಹಾಸಿಗೆಗಳು **ಬೌರಿಂಗ್ ಆಸ್ಪತ್ರೆ:** 686 ಹಾಸಿಗೆಗಳೂ
(ಇ)	ಈ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳೇನು ;	**ವಿಕ್ಟೋರಿಯಾ ಆಸ್ಪತ್ರೆ:** ಸಾಮಾನ್ಯ ವೈದ್ಯಕೀಯ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ಮೂಳೆ ಚಿಕಿತ್ಸೆ, ಕಿವಿ ಮೂಗು, ಗಂಟಲು, ಚಿಕಿತ್ಸೆ, ಸರ್ಜರಿ, ನೆಪ್ರಾಲಜಿ/ಯುರಾಲಜಿ, ನರರೋಗ ಚಿಕಿತ್ಸೆ, ಡಯಾಲಿಸಿಸ್, ಪೋರೆನ್ಸಿಕ್, ಭೌತಿಕ ಚಿಕಿತ್ಸೆ, ರಕ್ತನಿಧಿ ಸೌಲಭ್ಯ, ಅಪಘಾತ ಮತ್ತು ತುರ್ತು ಚಿಕಿತ್ಸೆ, ಕಾರ್ಡಿಯಾಲಜಿ, ಪೂವಾಥರಪಿ, ಫಿಜಿಯೋಥೆರಪಿ, ಬರ್ನ್ಸ್, ನ್ಯೂಕ್ಲಿಯರ್ ಮಡಿಸಿನ್, ರೇಡಿಯಾಲಜಿ, ರೇಡಿಯೋಥೆರಪಿ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕ್ರ.ಸಂ.	ಪ್ರಶ್ನೆ	ಉತ್ತರ
		ಬೌರಿಂಗ್ ಆಸ್ಪತ್ರೆ: ಸಾಮಾನ್ಯ ವೈದ್ಯಕೀಯ ಚಿಕಿತ್ಸೆ, ಶಸ್ತ್ರ ಚಿಕಿತ್ಸೆ, ಮೂಳೆ ಚಿಕಿತ್ಸೆ, ಕಿವಿ ಮೂಗು ಗಂಟಲು ಚಿಕಿತ್ಸೆ, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸೆ, ಮಕ್ಕಳ ರೋಗ ಚಿಕಿತ್ಸೆ, ಗ್ಯಾಸ್ಟ್ರೋಎಂಟ್ರಾಲಜಿ, ಸ್ಕಿನ್ ಅಂಡ್ ವಿಡಿ, ಪ್ಲಾಸ್ಟಿಕ್ ಸರ್ಜರಿ, ಕಣ್ಣಿನ ಚಿಕಿತ್ಸೆ, ಡಯಾಲಿಸಿಸ್, ಪೊರೆನ್ಸಿಕ್, ಭೌತಿಕ ಚಿಕಿತ್ಸೆ, ರಕ್ತನಿಧಿ ಸೌಲಭ್ಯ, ಅಪಘಾತ ಮತ್ತು ತುರ್ತು ಚಿಕಿತ್ಸೆ, ರೇಡಿಯಾಲಜಿ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿದೆ.
(ಈ)	ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ರೀತಿಯಲ್ಲಿ ಈ ಎರಡೂ ಆಸ್ಪತ್ರೆಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?	ಪರಿಶೀಲನೆಯಲ್ಲಿದೆ.

ಶ್ರೀವಿ. ಸೋಮಣ್ಣ: ಸನ್ಮಾನ್ಯ ಉಪಾಧ್ಯಕ್ಷರೇ, ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ಬರತಕ್ಕಂಥವರು ಬಡವರು. 764 ಹಾಸಿಗೆಗಳು ಇವೆಯೆಂದು ಏನು ಸಚಿವರು ಹೇಳಿದ್ದಾರೆ. ಇವುಗಳಲ್ಲಿ 25–30 ಹಾಸಿಗೆಗಳಾದರೂ ಚೆನ್ನಾಗಿದೆಯೇ? ಯಾರಾದರೂ ಆ ಹಾಸಿಗೆಗಳಲ್ಲಿ ಮಲಗಿಕೊಳ್ಳುವುದಕ್ಕೆ ಸಾಧ್ಯವಿದೆಯೇ? ಎರಡನೆಯದು, ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳಿಗೆ ಬರತಕ್ಕ ರೋಗಿಗಳೇನಿದ್ದಾರೆ. ಅವರಿಗೆ ತಾವು ಇಷ್ಟೊಂದು ಇಲಾಖೆಗಳನ್ನೇನು ನಡೆಸುತ್ತಿದ್ದೀರಿ. ಆ ಇಲಾಖೆಗಳಲ್ಲಿ ಮೂಲಭೂತ ಸೌಲಭ್ಯಗಳು ಇವೆಯೇ? ಔಷಧಿಗಳನ್ನು ಕೊಡುತ್ತಾ ಇದ್ದಾರೆಯೇ? ನಾನು ಮೊನ್ನೆ 4–5 ದಿನಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿ ಸಾಮಾನ್ಯ ಬಡವರಿಗೆ ನಾಯಿ ಕಚ್ಚಿರುವುದಕ್ಕೆ ಔಷಧಿಯಾಗಲೀ, ಇಂಜೆಕ್ಷನ್ ಆಗಲೀ ಇಲ್ಲ.

ಆಸ್ಪತ್ರೆ ಒಳಗಡೆ ಹೋದರೆ, ಅಲ್ಲಿರತಕ್ಕ ಶೌಚಾಲಯಗಳಲ್ಲಿ ಯಾರೂ ಕೂಡ ಮೂತ್ರ ಮಾಡುವುದಕ್ಕಾಗುವುದಿಲ್ಲ. ವಿಶೇಷವಾಗಿ ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಯುವಕರು ಇದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿರತಕ್ಕ ಬರ್ನಿಂಗ್ ವಾರ್ಡ್‌ನ ತುರ್ತು ಚಿಕಿತ್ಸಾ ಘಟಕಕ್ಕೆ ಅವರು ಹೋಗಿ ನೋಡಿಕೊಂಡು ಬಂದು, ತದನಂತರ ಏನು ಮಾಡಬೇಕೆಂಬುದನ್ನು ಅವರು ಹೇಳಲಿ. ನನ್ನ ಸ್ಪೆಸಿಫಿಕ್ ಪ್ರಶ್ನೆ ವಿಕ್ಟೋರಿಯಾ ಆಸ್ಪತ್ರೆ ಮತ್ತು ಲೇಡಿ ಕರ್ಜನ್ ಮತ್ತು ಬೌರಿಂಗ್ ಆಸ್ಪತ್ರೆಗೆ ಬರತಕ್ಕಂಥವರು ಸಾಮಾನ್ಯ ಬಡತನ ರೇಖೆಯಲ್ಲಿ ರತಕ್ಕ ಜನರಿಗೆ ಒಂದು ದಿನಕ್ಕೆ ಎಷ್ಟು ಖರ್ಚಾಗುತ್ತಾ ಇದೆ? ಯಾವ ರೀತಿ ತಾವು ಈ ಹಾಸಿಗೆಗಳನ್ನು ಮಾಡಿದ್ದೀರಿ? ಇವು ಎಷ್ಟು ವರ್ಷದ ಹಾಸಿಗೆಗಳು. ಅಲ್ಲಿ ಯಾರಾದರೂ ರೋಗಿಗಳು ಮಲಗುವುದಕ್ಕೆ ಸಾಧ್ಯವಿದೆಯೇ? ಬಡವರು ಅಲ್ಲಿಗೆ ಹೋದರೆ ಅಥವಾ ಅಲ್ಲಿದ್ದರೆ ಅವರ ಖಾಯಿಲೆಗಳು ವಾಸಿಯಾಗುತ್ತವೆಯೇ? ನುರಿತ ಡಾಕ್ಟರುಗಳು ಒಬ್ಬರೂ ಅಲ್ಲಿರುವುದಿಲ್ಲ. ಕೇವಲ ಹೌಸ್ ಸರ್ಜನ್‌ಗಳು ಮಾತ್ರ ಅಲ್ಲಿ ಅಟೆಂಡ್ ಮಾಡತಕ್ಕ ಪರಿಪಾಠವನ್ನು ನಡೆಸಿಕೊಂಡಿದ್ದಾರೆ. ಇನ್ನು ಎರಡನೆಯದು, ಜಯದೇವ ಆಸ್ಪತ್ರೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಗಳನ್ನು ಸ್ವಾಯುತ್ತ ಸಂಸ್ಥೆಗಳನ್ನಾಗಿ ಪರಿವರ್ತನೆ ಮಾಡುವುದಕ್ಕೆ ಆಗುತ್ತದೆಯೇ ಎಂದರೆ, ಪರಿಶೀಲನೆಯಲ್ಲಿದೆ ಎಂದು ಇವತ್ತೂ ಹೇಳುತ್ತಾರೆ. ನಾನು ಹಿಂದೆ ಒಂದು ಸಾರಿ 1999ರಲ್ಲಿ ಶಾಸಕನಾದಾಗ ಕೇಳಿದ್ದೆ. ಆಗಲೂ "ಪರಿಶೀಲನೆಯಲ್ಲಿದೆ" ಎಂದೇ ಹೇಳಿದ್ದರು. ಅಂದರೆ 5 ವರ್ಷ ಕಳೆದರೂ ಕೂಡ ಇನ್ನೂ "ಪರಿಶೀಲನೆಯೇ" ಈ ಪರಿಶೀಲನೆ ಎನ್ನುವುದಕ್ಕೆ ಬೇರೆ ಏನಾದರೂ ಅರ್ಥ ಎರಡು ಮೂರು ಪ್ರಶ್ನೆಗಳು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ 50 ಜನ ಎಂದು ಏನು ಒಳರೋಗಿಗಳು ಎಂದು ಹೇಳುತ್ತೀರಿ. ಇದು ಸ್ಪೆಸಿಫಿಕ್ ಆಗಿ, ನಿಮಗೆ ಯಾವ ಮಾಹಿತಿಯಿಂದ ಹೇಳುತ್ತಿದ್ದೀರಿ. 950 ಜನ ಹೊರ ರೋಗಿಗಳು ಏನು ಬರುತ್ತಾರೆ. ಅವರಿಗೇನಾದರೂ ಔಷಧಿ ಇತ್ಯಾದಿ ಕೊಡುತ್ತೀರಾ? ತಾವು ಇಷ್ಟೊಂದು ಇಲಾಖೆಗಳೇನು ನಡೆಸುತ್ತಿದೀರಿ, ಆ ಇಲಾಖೆಗಳಲ್ಲಿ ವಿಶೇಷವಾಗಿ ಯೂರಿಯಲಜಿ ಇಲಾಖೆಯೊಂದನ್ನು ಬಿಟ್ಟರೆ, ಬೇರೆ ಎಲ್ಲ ಇಲಾಖೆಗಳವರು ಕೂಡ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸತ್ತಂತಹ ವ್ಯವಸ್ಥೆಯಾಗಿದೆ. ಆ ರೋಗಿಗಳನ್ನು ಏನಾದರೂ ತಾವು ನೋಡುತ್ತಾ ಇದ್ದೀರಾ? ಇದಕ್ಕೆ ಏನಾದರೂ ಮಾಡಿ, ಮೂಲಭೂತ ಸೌಕರ್ಯಗಳಿಗಾಗಿ ಖರ್ಚು ಮಾಡತಕ್ಕಂಥಾದ್ದು ಇದೆಯೇ? ಬೋರ್ಡ್ ಆಫ್ ವಿಸಿಟರ್ಸ್‌ನ್ನು ತಾವು ಕಾನ್‌ಸ್ಟಿಟ್ಯೂಟ್ ಮಾಡಿದ್ದೀರಾ ದಯವಿಟ್ಟು ತಿಳಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಕಾರ್ಡಿಯಾಲಜಿ ಯೂನಿಟ್ ಇಲ್ಲವೆಂದು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾಕ್ಕೆ ಬರೆದು, ಬೆಂಗಳೂರು ಮೆಡಿಕಲ್ ಕಾಲೇಜು ಆಸೋಲ್ಯೇಷನ್‌ನ್ನೇ ರದ್ದು ಮಾಡಬೇಕಾದ ಪರಿಸ್ಥಿತಿ ಬಂದಿದೆ. ತಾವು ಕಾರ್ಡಿಯಾಲಜಿ

ಮೂನಿಟ್ ವರ್ಕ್ ಮಾಡುತ್ತಿದೆಯೆಂದು ಉತ್ತರ ಕೊಡುತ್ತಿದ್ದೀರಿ. ಒಂದು ಇ.ಸಿ.ಜಿ. ಮಿಷನ್ ಬಿಟ್ಟುಬಿಟ್ಟರೆ, ಅಲ್ಲಿ ಕಾರ್ಡಿಯಾಲಜಿ ಯೂನಿಟ್ ಇಲ್ಲ. ಪ್ರೊಫೆಸರ್ ಇಲ್ಲ. ಅಸಿಸ್ಟೆಂಟ್ ಪ್ರೊಫೆಸರ್ ಇಲ್ಲ. ಸಿಬ್ಬಂದಿ ಇಲ್ಲ. ನಾವೆಲ್ಲಾ 10 ವರ್ಷದಿಂದ ಕೇಳುತ್ತ ಇದ್ದೇವೆ. ಅಲ್ಲಿ ಎಮರ್ಜೆನ್ಸಿಗೊಂದು ಕಾರ್ಡಿಯಾಲಜಿ ಯೂನಿಟ್ ಇಡಿ ಎಂದು ನೆಫ್ರೋಲಜಿ ಇದೆ. ಅಲ್ಲಿ ಡಾಕ್ಟರನ್ನು ಕೆಲಸ ಮಾಡುವುದಕ್ಕೆ ಬಿಡುತ್ತಾ ಇಲ್ಲ. ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ ಅವರ ಮೇಲೆ ಒತ್ತಡ. ಏಕೆ ಈ ತರಹ ಉತ್ತರ ಕೊಡುತ್ತೀರಿ. ತಾವು ಒಂದು ಸಲ ಹೋಗಿ ಬನ್ನಿ. ಕಾರ್ಡಿಯಾಲಜಿ ಯೂನಿಟ್ ಎಲ್ಲಿದೆ? ಆ ಯೂನಿಟ್‌ನಲ್ಲಿ ಎಷ್ಟು ಜನ ಡಾಕ್ಟರುಗಳೂ ಇದ್ದಾರೆ? ಕಾರ್ಡಿಯಾಲಜಿ ಯೂನಿಟ್ ಇದೆ. ನೆಫ್ರೋಲಜಿ ಇದೆ. ಯೂರಲಜಿ ಇದೆಯೆಂದು ಶಾಸಕರುಗಳಿಗೆ ಉತ್ತರ ಕೊಟ್ಟುಬಿಟ್ಟರೆ ಗತಿ ಏನು?

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಬೌರಿಂಗ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆ ಯಾವ ಸ್ಟೇಜ್‌ನಲ್ಲಿದೆ ಎಂದರೆ ಪಾಪ! ಮಂತ್ರಿಯವರು ಹೊಸಬರು, ಯುವಕರು, ಉತ್ಸಾಹಿಗಳೂ, ಒಳ್ಳೆಯ ಕೆಲಸ ಮಾಡಬೇಕೆಂದು ಅವರಿಗೆ ಇಷ್ಟ ಇದೆ. ಆದರೂ ವಿಕ್ಟೋರಿಯಾ ಆಸ್ಪತ್ರೆ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಏನೇನೂ ಆಗುತ್ತಿಲ್ಲ. ನನಗೆ ನಾಚಿಕೆಯಾಗುತ್ತಿದೆ! ಇವತ್ತು ನಾನು ನಾಲ್ಕು ಬಾರಿ ಈ ಸದನದ legislator ಆಗಿದ್ದೇನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಆ burns ward ಗತಿ ನೋಡಿದರೆ, ಯಾರನ್ನಾದರೂ ಅಲ್ಲಿಗೆ ಕರೆದುಕೊಂಡು ಹೋಗಿ admit ಮಾಡಿದರೆ, ಅಲ್ಲಿ ಬೆಡ್ಸ್ ಇಲ್ಲ, ಅಲ್ಲಿಯ ಕಾರಿಡಾರ್‌ನಲ್ಲಿ ಅವರನ್ನು ಹಾಕಿರುತ್ತಾರೆ. ಅಲ್ಲಿ ಒಬ್ಬ patient ಹಾಕಿದರೆ ಆತ infectionನಿಂದಲೇ ಸತ್ತು ಹೋಗುತ್ತಾನೆ Burns ward ನಲ್ಲಿ infection ಇದೆ. ಇದಕ್ಕೆ ಮುಂಚೆ ಕೂಡ ಈ ಬಗ್ಗೆ ಈ ಸದನದಲ್ಲಿ ಪ್ರಸ್ತಾಪವಾಗಿದೆ. ಆಶ್ವಾಸನೆ ಕೂಡ ಕೊಟ್ಟಿದ್ದಾರೆ. ಆದರೆ Burns ward ನಲ್ಲಿ ಏನೂ ಸುಧಾರಣೆಯಾಗಿಲ್ಲ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಇದರ ಬಗ್ಗೆ ಒಂದು ಸದನದ committee ಮಾಡಿ ಎಂದು request ಮಾಡಿಕೊಳ್ಳುತ್ತೇನೆ. ನಾವೆಲ್ಲಾ ಹೋಗೋಣ. ಎಲ್ಲಿಯವರೆಗೆ ನಾವು ಅಲ್ಲಿಗೆ ಹೋಗುವುದಿಲ್ಲವೋ, ಅಲ್ಲಿಯವರೆಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನು ಸುಧಾರಣೆಯಾಗುವುದಿಲ್ಲ, ಬೌರಿಂಗ್ ಆಸ್ಪತ್ರೆಯಲ್ಲೂ ಕೂಡ ಸುಧಾರಣೆಯಾಗುವುದಿಲ್ಲ ಇನ್ನೊಂದು ಸಲ ನಾವು ಬರುತ್ತೇವೆ, ಇನ್ನೊಂದು ಸಲ ಹೀಗೇ ಪ್ರಶ್ನೆ ಹಾಕುತ್ತೇವೆ, ಇನ್ನೊಬ್ಬರು ಯಾರೋ ಮಂತ್ರಿಗಳೊಬ್ಬರು ಅದಕ್ಕೆ reply ಕೊಡುತ್ತಾರೆ ಮಾನ್ಯ ಸಭಾಧ್ಯಕ್ಷರೆ, ನಾನು ಚಿಕ್ಕ ಹುಡುಗ ಆದಾಗಿನಿಂದ ಬೌರಿಂಗ್ ಆಸ್ಪತ್ರೆಗೆ ಹೋಗಿ ಬರುತ್ತಿದ್ದೇನೆ. ನಾನು first time MLA ಆದಾಗಿನಿಂದ ಕೇಳುತ್ತಿದ್ದೇನೆ. ದೆಹಲಿಯಲ್ಲಿ All India

Institute of Medical Sciences (AIIMS)ಎಂಬುದು ಇದೆ ಬೌರಿಂಗ್ ಆಸ್ಪತ್ರೆಯನ್ನು AIIMS level ನ ಒಂದು ಆಸ್ಪತ್ರೆಯನ್ನಾಗಿ ಮಾಡಬೇಕು. ಅದನ್ನು ಆ ರೀತಿಯಾಗಿ upgrade ಮಾಡಿ ಅದಕ್ಕೆ Government of India ದವರು ನಿಮಗೆ ಹಣ ಕೊಡಲಿಕ್ಕೆ ತಯಾರಿದ್ದಾರೆ. ಆದರೆ ಇಲ್ಲಿರುವ ಅಧಿಕಾರಿಗಳು, ಅವರ ಅಪ್ಪನ ಆಸ್ತಿ ತರಹ, ಅವರ ಕೈಯಿಂದ ಇದನ್ನು upgrade ಮಾಡುವುದಿಲ್ಲ? All India Institute of Medical Sciences, South India ನಲ್ಲಿ ಪಾಂಡಿಚೇರಿ ಬಿಟ್ಟು ಬೇರೆ ಎಲ್ಲಿಯೂ ಇಲ್ಲ. ಬೆಂಗಳೂರಿನಲ್ಲಿರುವ ಬೌರಿಂಗ್ ಆಸ್ಪತ್ರೆಯನ್ನು ಆ ಲೆವೆಲ್ upgrade ಗೆ ಮಾಡಿಸಿ

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ಸೋಮಣ್ಣನವರು ಕೇಳಿದ ಪ್ರಕಾರ ಈಗಾಗಲೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿನ ಒಳರೋಗಿಗಳ ಬಗ್ಗೆ ಮತ್ತು ಹೊರ ರೋಗಿಗಳ ಬಗ್ಗೆ ಮಾಹಿತಿಗಳನ್ನು ಅವರಿಗೆ ಕೊಟ್ಟಿದ್ದೇನೆ. ಇನ್ನು ಬೌರಿಂಗ್ ಆಸ್ಪತ್ರೆ ಬಗ್ಗೆ ಹೇಳಬೇಕೆಂದರೆ, ವಿಕ್ಟೋರಿಯಾ ಆಸ್ಪತ್ರೆಗೆ ನಾನು ಇನ್ನೂ ಭೇಟಿ ಕೊಟ್ಟಿಲ್ಲ, ತಾವು ಹೇಳಿದ ಪ್ರಕಾರ, ತಮ್ಮ ಸಲಹೆಯ ಮೇರೆಗೆ, ಅಧಿವೇಶನ ಮುಗಿದ ತಕ್ಷಣವೇ, ದಿಢೀರನೆ ಭೇಟಿ ಕೊಟ್ಟು ತಮ್ಮ ಸಲಹೆಗಳೇನು ಇವೆಯೋ ಅದರ ಪ್ರಕಾರ ಅಲ್ಲಿ ನ್ಯೂನತೆಗಳು ಏನಾದರೂ ಕಂಡು ಬಂದರೆ, ಅದನ್ನು ಸರಿಪಡಿಸುತ್ತೇವೆ. ಬೌರಿಂಗ್ ಆಸ್ಪತ್ರೆಗೆ ನಾನು ಈಗಾಗಲೇ ಭೇಟಿ ಕೊಟ್ಟಿದ್ದೇವೆ. ಬೌರಿಂಗ್ ಆಸ್ಪತ್ರೆಯಲ್ಲಿ ಸರ್ಕಾರದ ಆದೇಶದ ಪ್ರಕಾರ, ಆದೇಶದ ಮೇರೆಗೆ ಔಷಧಿಗಳನ್ನು ರೋಗಿಗಳಿಗೆ ಕೊಡುತ್ತಿದ್ದಾರೆ. ಎರಡನೆಯದಾಗಿ, ಪ್ರತಿಯೊಂದು patientಗಳನ್ನು ನಾನೇ ಖುದ್ದಾಗಿ ಹೋಗಿ ವಿಚಾರಿಸಿ, ಕೇಳಿದ್ದೇವೆ. ಏನಾದರೂ ಇಲ್ಲಿ ನಿಮಗೆ ಕಿರುಕುಳಗಳನ್ನು ಕೊಡುತ್ತಿದ್ದಾರೋ ಅಥವಾ ಹಣವನ್ನು ದೋಚುತ್ತಿದ್ದಾರೋ ಎಂದು ನಾನು ಅವರನ್ನು ಕೇಳಿದಾಗ, ಅಂತಹ ಯಾವ ದೂರುಗಳೂ ಸಹಿತ ನನ್ನ ಗಮನಕ್ಕೆ ಬಂದಿಲ್ಲ. ಇನ್ನು ಬೆಡ್ ಗಳ ಬಗ್ಗೆ ತಾವು ಹೇಳಿದಿರಿ. ಬೆಡ್‌ಗಳ ಸ್ವಚ್ಛತೆಯ ಬಗ್ಗೆ ಜನರಲ್ ವಾರ್ಡ್‌ನಿಂದ ಹಿಡಿದು ಪ್ರತಿಯೊಂದು ವಾರ್ಡ್‌ಗೆ ಹೋಗಿ ನಾನು ಬೌರಿಂಗ್ ಆಸ್ಪತ್ರೆಯಲ್ಲಿ ನೋಡಿದ್ದೇವೆ. ಅದು ವ್ಯವಸ್ಥಿತವಾಗಿ, ಚೆನ್ನಾಗಿದೆ. ಇನ್ನು ಮಾನ್ಯ ಹಿರಿಯ ಸದಸ್ಯರಾದ ರೋಷನ್ ಬೇಗ್ ಸಾಹೇಬ್‌ರವರು ಇದನ್ನು AIIMS levelಗೆ upgrade ಮಾಡಲು ಹಣದ ವ್ಯವಸ್ಥೆಯನ್ನು ಮಾಡಲಿಕ್ಕೆ ಕೇಂದ್ರದವರು ತಯಾರಿದ್ದಾರೆ. ಆದರೆ ಇಲ್ಲಿ ಇರತಕ್ಕಂಥ ಅಧಿಕಾರಿಗಳು ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಸಚಿವಾಲಯಕ್ಕೆ ಕೊಡುತ್ತಿಲ್ಲ ಎಂದು ಹೇಳಿದರು. ಇದರ ಬಗ್ಗೆ ನಾನು ತಕ್ಷಣವೇ ಪರಿಶೀಲನೆ ಮಾಡಿ ತಕ್ಷಣವೇ ಅಲ್ಲಿinspection ಮಾಡಿ, ಆ ಅಧಿಕಾರಿ ಯಾರೇ ಇರಲಿ, ಆದರೆ ಸರ್ಕಾರ ಅವರ ಮಾತನ್ನು ಕೇಳದೆ, ನಮ್ಮ ರಾಜ್ಯದ ಬಡ ರೋಗಿಗಳಿಗೆ ಏನೇನು ಸವಲತ್ತುಗಳನ್ನು

ಕೇಂದ್ರದಿಂದಾಗಲಿ ಅಥವಾ ರಾಜ್ಯದಿಂದಾಗಲಿ ಕೊಡಬೇಕೋ, ಅದನ್ನು ಕೊಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇನ್ನು ಎರಡನೆಯದಾಗಿ, ನಮ್ಮ ಹಿರಿಯರಾದಂತಹ ಸೋಮಣ್ಣನವರು ಕೇಳಿದ ಪ್ರಕಾರ, ಜಯದೇವ ಹೃದ್ರೋಗ ಸಂಸ್ಥೆ ಮತ್ತು ಕಿದ್ವಾಯಿ ರೀತಿಯಲ್ಲಿ ಅದನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸುವುದರ ಬಗ್ಗೆ ಹೇಳುವುದಾದರೆ, ಈಗಾಗಲೇ ಉತ್ತರ ಕೊಟ್ಟ ಹಾಗೆ, ಅದು ಪರಿಶೀಲನೆಯಲ್ಲಿದೆ, ಅದಕ್ಕೆteaching hospitalಆಗಿ Bangalore Medical College ಅನ್ನು attach ಮಾಡಲಾಗಿದೆ. ಬಳ್ಳಾರಿಯVIMS ಮತ್ತು KIMS ಪ್ರಕಾರ ಮಾಡಬೇಕೆಂದು ಈಗಾಗಲೇ ಸರ್ಕಾರ ಚಿಂತನೆ ಮಾಡುತ್ತಿದೆ. ಅತಿಶೀಘ್ರದಲ್ಲೇ ಅದನ್ನೊಂದು autonomous body ಆಗಿ ಮಾಡಲಾಗುತ್ತದೆ.ಇನ್ನು ಮತ್ತೊಬ್ಬ ಹಿರಿಯ ಸದಸ್ಯರು cardiologist unitsಸರಿಯಾದ ವ್ಯವಸ್ಥೆಯಲ್ಲಿ ಇಲ್ಲ ಎಂದು ಹೇಳಿದರು. ಬಹುಶಃ ಅವರು ವಿಕ್ಟೋರಿಯಾ ಆಸ್ಪತ್ರೆ ಬಗ್ಗೆ ಆ ಮಾತುಗಳನ್ನು ಹೇಳಿರಬಹುದು. ನಾನು ಈಗಾಗಲೇ ಹೇಳಿದಂತೆ, ನಾನು ಅಲ್ಲಿ ಇನ್ನೂ inspection ಮಾಡಿಲ್ಲ. Next ನಾನು ಅಲ್ಲಿ inspection ಅನ್ನು ಮಾಡಿ, ಅದರಲ್ಲಿ ಏನಾದರೂ ನ್ಯೂನತೆಗಳು ಇದ್ದರೆ, ತಕ್ಷಣವೇ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆಂದು ನಾನು ಈ ಸದನಕ್ಕೆ ತಿಳಿಸುತ್ತಿದ್ದೇನೆ.

ಶ್ರಿ ವಿ. ಸೋಮಣ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅನ್ಸಾರಿಯವರ ಬಗ್ಗೆ ನನಗೆ ತುಂಬಾ ಖುಷಿಯಾಯಿತು. ಬಹುಶಃ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡುವ ಬಗ್ಗೆ ಅವರು ಮೊದಲೇ ಟೈಮ್ ಕೊಟ್ಟು ಹೋಗಿದ್ದರು ಎಂದು ಕಾಣುತ್ತದೆ. ನಾನು ಸುಮಾರು 32–33 ವರ್ಷಗಳಿಂದ ಬೆಂಗಳೂರು ನಗರದ ವಿಕ್ಟೋರಿಯಾ ಆಸ್ಪತ್ರೆಯನ್ನು ನೋಡುತ್ತಿದ್ದೇವೆ. 1983–94ರಲ್ಲೇ ಸದರಿ ಆಸ್ಪತ್ರೆಯ Board of Visitors ನಲ್ಲಿ ನಾನಿದ್ದೆ. ಅಲ್ಲಿಯ ಬರ್ನಿಂಗ್ ವಾರ್ಡ್ ಇತ್ಯಾದಿಗಳನ್ನೆಲ್ಲಾ ನಾನು ನೋಡಿದ್ದೇವೆ. ವಾರಕ್ಕೆ 3–4 ಸಾರಿಯಾದರೂ ನಾವು ಆ ಆಸ್ಪತ್ರೆಗಳಿಗೆ ಹೋಗದೆ ವಿಧಿಯಿಲ್ಲ. ಮಾನ್ಯ ಸಚಿವರು ಅಲ್ಲಿ ಬೆಡ್‌ಗಳು ಚೆನ್ನಾಗಿವೆ ಎಂದು ಹೇಳಿದರು. ಅಲ್ಲಿ ಬೆಡ್‌ಗಳೂ ಇಲ್ಲ, ಬೆಡ್‌ಗಳ ಮೇಲಿರತಕ್ಕಂಥದ್ದೂ ಸಹ ಇಲ್ಲ. ನೀವು ದಯಮಾಡಿ Board of Visitorsಅನ್ನು immediatelyಮಾಡಿ. ಬೆಂಗಳೂರಿನ ಶಾಸಕರು ಅದರ ವ್ಯಾಪ್ತಿಗೆ ಬರುವಂತೆ ಮಾಡಿ. ಬೆಂಗಳೂರು ನಗರದ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗೆ ಹೆಚ್ಚಾಗಿ ಹಳ್ಳಿಗಾಡಿನ ಜನರೇ ಬರುತ್ತಾರೆ. ಅವರ ಕಷ್ಟ ನೀವು ಸಾಯಂಕಾಲ ಮತ್ತು ಮಳೆ ಬಂದಾಗ ನೋಡಿದರೆ, ನಿಮಗೆ ಮಾನವೀಯತೆ ಇರತಕ್ಕಂಥವರು ಅಲ್ಲಿ ಯಾರಿರುತ್ತಾರೆ ಎಂಬದು ಗೊತ್ತಾಗುತ್ತದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ Board of Visitorsನಲ್ಲಿ ನಾನು 10 ವರ್ಷ ಇದ್ದೆ. ಕಿದ್ವಾಯ್ ಕ್ಯಾನ್ಸರ್ ಇನ್ಸ್‌ಟಿಟ್ಯೂಟ್‌ನ ಬೋರ್ಡ್‌ನಲ್ಲೂ 10 ವರ್ಷ ಇದ್ದೆ. ನಾನಾಗಲಿ ಅಥವಾ ಮಾನ್ಯ ರೋಷನ್ ಬೇಗ್ ಆಗಲಿ, ಲೇಡಿ ಕರ್ಜನ್ ಮತ್ತು ಬೌರಿಂಗ್‌ನಲ್ಲೂ ಕೂಡ ನಾವು

ಕೆಲಸ ಮಾಡಿದ್ದೇವೆ. ಭ್ರಷ್ಟಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ಅದರ ಬಗ್ಗೆ ಮಾತನಾಡುವಂತಹ ವ್ಯವಸ್ಥೆಯನ್ನೇ ನಾವು ಕಳೆದುಕೊಂಡಿರುವುದರಿಂದ ಅದರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಆದರೆ ಒಂದಂತೂ ಸತ್ಯ ಕರ್ತವ್ಯ ಲೋಪ ಮಾಡುತ್ತಿರತಕ್ಕಂಥ ಡಾಕ್ಟರ್ ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹೌಸ್ ಸರ್ಜನ್‌ಗಳ ಕೈಯಲ್ಲಿ ಕೆಲಸ ಮಾಡಿಸುತ್ತಾರೆ. ಎಂ.ಡಿ. ಮಾಡಿರುವವನು ಅಲ್ಲಿ ಬಂದು ಕೆಲಸ ಮಾಡುವುದೇ ಇಲ್ಲ. ಅಲ್ಲಿ ಸುಮಾರು 25–30 ವರ್ಷಗಳಷ್ಟು serviceಆಗಿರುವ ಯಾವ ಮೇಲ್ ನರ್ಸ್ ಆಗಲಿ ಅಥವಾ ಫೀಮೇಲ್ ನರ್ಸ್ ಆಗಲಿ ರಾತ್ರಿ ಹೊತ್ತು ಕೆಲಸಕ್ಕೆ ಬರುವುದಿಲ್ಲ. ದಯವಿಟ್ಟು ತಾವು ಬೇರೆಯದಕ್ಕೆ ಏನು ಮಾಡುತ್ತೀರೋ ಬಿಡುತ್ತೀರೋ, ಬೆಂಗಳೂರು ನಗರದ ಇವೆರಡೂ ಆಸ್ಪತ್ರೆಗಳೂ ಜನತೆಗೆ ಭಾರೀ ಉಪಯುಕ್ತ ಕೆಲಸವನ್ನು ಮಾಡತಕ್ಕಂಥವುಗಳಾಗಿವೆ. ಇವುಗಳಿಗೆ ನೂರು ವರ್ಷಗಳಷ್ಟು ಇತಿಹಾಸ ಇದೆ. ದಯಮಾಡಿ ತಾವು ಅಲ್ಲಿಗೆ ಹೋಗಿ 2–3 ಗಂಟೆ ಕುಳಿತುಕೊಳ್ಳಿ. ನಾವೂ ಬರುತ್ತೇವೆ. ನೀವೇನು ಹೇಳುತ್ತೀರೋ, ಅದು ಸತ್ಯಕ್ಕೆ ದೂರವಾಗಿದೆ. ಇಷ್ಟೊಂದು ಡಿಪಾರ್ಟ್‌ಮೆಂಟ್‌ಗಳು ಯಾವಾದರೂ ಅಲ್ಲಿ ನಡೆಯುತ್ತವೆ ಎಂದು ಯಾರಾದರೂ ಹೇಳಿಬಿಟ್ಟರೆ, ನೀವೇನು ಹೇಳುತ್ತೀರೋ ಅದನ್ನು ನಾವು ಕೇಳುತ್ತೇವೆ. ಮಾನ್ಯ ಅನ್ಸಾರಿ ಸಾಹೇಬರ ಬಗ್ಗೆ ನಮಗೆ ಗೌರವ ಇದೆ, ಅವರು ಕನ್ನಡ ತುಂಬಾ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅದಕ್ಕೆ ಇನ್ನೂ ಹೆಚ್ಚು ಬೆಲೆ ಇದೆ. ಆದರೆ ನೀವು ಕೊಟ್ಟಿರತಕ್ಕಂಥ ಮಾಹಿತಿ ಎಲ್ಲವೂ ಕೂಡ ಎಲ್ಲೋ ಒಂದು ಕಡೆ ಪುಸ್ತಕದಲ್ಲಿರತಕ್ಕಂಥ ವ್ಯವಸ್ಥೆಯಾಗಿದೆ. ಇದನ್ನು ತಾವು ದಯಮಾಡಿ ಬದಲಾವಣೆ ಮಾಡುವುದಕ್ಕೆ ಆಗದೇ ಇದ್ದರೆ ಅವೆರಡನ್ನೂ ಮುಚ್ಚಿ ಬಡವರಿಗೆ ನೀವು ಹೇಳಿಬಿಡಿ. ಸ್ವಾಯತ್ತತೆ ಏಕೆ ತನ್ನಿ ಎಂದು ನಾನು ಹೇಳಿದನೆಂದರೆ ಕನಿಷ್ಠ ಅಲ್ಲಿಗೆ ಹೋಗತಕ್ಕಂಥ ಜನರಿಗೆ ಏನಾದರೂ ಒಳ್ಳೆಯದನ್ನು ಮಾಡಬೇಕು ಎಂದು ಇದೆ. ಅಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ನರಕಯಾತನೆಯನ್ನು ರೋಗಿಗಳು ಅನುಭವಿಸುತ್ತಿದ್ದಾರೆ. ಅಲ್ಲಿರುವ 760 ಬೆಡ್‌ಗಳಲ್ಲಿ 200 ಬೆಡ್‌ಗಳು ಸರಿಯಾಗಿ ಇದ್ದರೆ, ನೀವು ಹೇಳಿದ ಹಾಗೆ ನಾನು ಕೇಳುತ್ತೇವೆ. ಆದುದರಿಂದ ತಾವು ಅಧಿಕಾರಿಗಳು ತಮಗೆ ಕೊಡುವ ಮಾಹಿತಿ ಎಲ್ಲವೂ ಸತ್ಯ ಎಂದು ತಿಳಿದುಕೊಳ್ಳಬೇಡಿ. ನಮಗೂ ಕೂಡ ಜವಾಬ್ದಾರಿ ಇದೆ. ಸುಮಾರು 23–24 ವರ್ಷಗಳಿಂದ ಆ ಆಸ್ಪತ್ರೆಗಳಿಗೆ ವಾರಕ್ಕೆ ಮೂರ್ನಾಲ್ಕು ಬಾರಿ ಭೇಟಿಯನ್ನು ನಾವು ಕೊಡುತ್ತೇವೆ. ಅಲ್ಲಿ ನಡೆಯತಕ್ಕಂಥ ಅವ್ಯವಸ್ಥೆ ಬಗ್ಗೆ ಲ್ಯಾಂಡ್ರಿಯಿಂದು ಹಿಡಿದು ಎಲ್ಲದರಲ್ಲೂ ಅಲ್ಲಿ ನಡೆಯುತ್ತಿರುವ ಕಥೆ ನಮಗೆ ಗೊತ್ತಿದೆ. ಆದುದರಿಂದ ತಾವು ತಮಗೆ ಅಧಿಕಾರಿಗಳು ಕೊಡುವ ಎಲ್ಲ ಮಾಹಿತಿಯೂ ಕೂಡ ಸರಿ ಇರುತ್ತದೆ. ಅದು ಶಾಸನ ಎಂದು ತಾವು ತಿಳಿದುಕೊಳ್ಳದೇ, ಅದು ಸರಿಯಾಗಿ ಕರ್ತವ್ಯ

ಮಾಡುವುದಕ್ಕೆ ತಾವು ಅಣಿ ಮಾಡಬೇಕುBoard of visitors ಅನ್ನು ತಾವು ತಕ್ಷಣವೇconstitute ಮಾಡಬೇಕು.

ಶ್ರೀ ಮಹದೇವ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಲು ನನಗೂ ಅವಕಾಶ ಕೊಡಬೇಕು. ಮಾನ್ಯ ಸೋಮಣ್ಣನವರು ಮಾತನಾಡಿದರು. ಮಾನ್ಯ ಅನ್ಸಾರಿಯವರು ನೂತನವಾಗಿ ಸಚಿವರಾಗಿದ್ದಾರೆ.

ಉಪಾಧ್ಯಕ್ಷರು: ಮಹಾದೇವ್ ರವರೆ, question hour ಇದು ಇದುzero hour ಅಲ್ಲ.

ಶ್ರೀ ಮಹದೇವ್: ನನಗೆ ಗೊತ್ತಿದೆ ಸಾರ್. ಈಗ ಹಾಸ್ಪಿಟಲ್ ಬಗ್ಗೆ ಅವರು ಹೇಳಿದರು.....

ಶ್ರೀ ವಾಟಾಳ್ ನಾಗರಾಜ್: ಇದು ಪ್ರಶ್ನೋತ್ತರದ ಅವಧಿಯೇ. ನಮಗೆ ಅದು ಗೊತ್ತಾಗಲಿಲ್ಲ. ತಾವು ಮೊದಲು ಹೇಳುವುದಲ್ಲವೇ?

ಉಪಾಧ್ಯಕ್ಷರು: ಇದು question hourಎಂಬುದನ್ನು ಮೊದಲೇ announce ಮಾಡಿದ್ದಾರೆ. ಅದನ್ನು ಸದಸ್ಯರಿಗೆ ಹೇಳಬೇಕಾಗಿಲ್ಲ. ಇಲ್ಲಿ ಎಲ್ಲ ಅನುಭವಸ್ಥರೇ ಸಾಕಷ್ಟು ಜನ ಇದ್ದಾರೆ. ಅದನ್ನೆಲ್ಲಾ ಹೇಳುತ್ತಾ ಹೋದರೆ 24 ಗಂಟೆ ಅದನ್ನೇ ಹೇಳಿಕೊಂಡು ಕುಳಿತಿರಬೇಕಾಗುತ್ತದೆ. ಮಾನ್ಯ ಮಹದೇವ್, ಬೇಗ ಮುಗಿಸಿ ಬಿಡಿ.

ಶ್ರೀ ಮಹದೇವ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ಮಾನ್ಯ ಸೋಮಣ್ಣನವರು ಹೇಳಿದ ಹಾಗೆ, ಲಿಖಿತವಾಗಿ ಅಧಿಕಾರಿಗಳು ಕೊಟ್ಟಂತಹ ಮಾಹಿತಿಯನ್ನು ಇವರು ಹೇಳಿದ್ದಾರೆ.Scheduled visit ಮಂತ್ರಿಗಳು ಯಾರೇ ಹೋದರೂ ಆಗ spic and spanಹಾಸ್ಪಿಟಲ್ ಇದ್ದೆ ಇರುತ್ತದೆ. ಯಾರನ್ನೇ ಆದರೂ, ಡಾಕ್ಟರ್‌ಗಳು ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೇ?' ಎಂದು ಕೇಳಿದರೆ. ಅವರು ನಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಎಂದೇ ಅವರು ಹೇಳುತ್ತಾರೆ. ಬೆಂಗಳೂರಿನಲ್ಲಿ ಬೆಳೆದಂತಹ ಮತ್ತು ಓದಿದಂತಹ ಪ್ರತಿಯೊಬ್ಬ ನಾಗರಿಕನಿಗೂ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳ ಬಗ್ಗೆ ಗೊತ್ತಿದೆ. ಅಲ್ಲಿರುವಂತಹ ದರಿದ್ರ, ಅಲ್ಲಿ ನಡೆಯುವ ಮೋಸ. ವಂಚನೆ ಎಲ್ಲರಿಗೂ ಗೊತ್ತು ಅಲ್ಲಿ ಬೆಡ್ ಮಾರಿಕೊಳ್ಳುವುದರಿಂದ ಹಿಡಿದು ಮೆಡಿಸಿನ್ ಮಾರಿಕೊಳ್ಳುವುದರವರೆಗೆ ನಾವು ನೋಡಿದ್ದೇವೆ. ಮಾನ್ಯ ಸಚಿವರ ಬಗ್ಗೆ ನಮಗೆ ಗೌರವ ಇದೆ. ನಿಮಗೆ ಕಾಳಜಿ ಇದೆ ಎಂದು ನಮಗೆ ಗೊತ್ತಿದೆ. ಆದರೆ ದಯವಿಟ್ಟು don't go by officials.ನೀವು un-scheduled visit ಹೋಗಿ ನೋಡಿದರೆ ನಿಮಗೆ ಅಲ್ಲಿರುವ ಎಲ್ಲಾ ಹೊಲಸು ಗೊತ್ತಾಗುತ್ತದೆ. ನಮ್ಮ ಮನಸ್ಸಿನ ಸಮಾಧಾನಕ್ಕೆ ಸದನದಲ್ಲಿ

ಇದರ ಬಗ್ಗೆ ಚರ್ಚೆ ಮಾಡುವಾಗ, ನೀವು ದಯವಿಟ್ಟು ಅಲ್ಲಿ ಎಲ್ಲವೂ ಸರಿ ಇದೆ ಎಂದು ಆಸ್ಪತ್ರೆ ಬಗ್ಗೆ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ. ನೆ.ಲ. ನರೇಂದ್ರ ಬಾಬು: ಮಾನ್ಯ ಉಪಾಧ್ಯಕ್ಷರೆ, ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ ಮತ್ತು ಕೆ.ಸಿ. ಜನರಲ್ ಆಸ್ಪತ್ರೆ ಬೆಂಗಳೂರಿನ 70 ಲಕ್ಷ ಜನತೆಗೆ ಮತ್ತು ಕರ್ನಾಟಕದ 5 ಕೋಟಿ ಜನತೆಗೆ ಇರತಕ್ಕಂಥ ಆಶಾಕಿರಣದ ಸರ್ಕಾರಿ ಆಸ್ಪತ್ರೆಗಳಾಗಿವೆ. ಬೇರೆ ಬೇರೆ ಊರುಗಳಿಂದ ಜನತೆ ಇಲ್ಲಿಗೆ ಚಿಕಿತ್ಸೆಗೆ ಬಂದು ತೊಂದರೆ ಅನುಭವಿಸುವುದನ್ನು ನಾವು ಪ್ರತಿ ನಿತ್ಯವೂ ನೋಡುತ್ತಿದ್ದೇವೆ. ಖಾಸಗಿ ನರ್ಸಿಂಗ್ ಹೋಮ್‌ಗಳಿಗೂ ಮತ್ತು ಈ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಡಾಕ್ಟರ್‌ಗಳಿಗೂ ಏನಾದರೂ adjustment ಇದೆಯೇ? ಎಂದು ನನಗೆ ಒಂದು ಸಂಶಯ ಬರುತ್ತಿದೆ. ಏಕೆಂದರೆ, ಇವತ್ತು ಖಾಸಗಿ ನರ್ಸಿಂಗ್ ಹೋಂಗಳು ಜಾಸ್ತಿಯಾಗುತ್ತಾ ಇವೆ. ಸರ್ಕಾರಿ ಆಸ್ಪತ್ರೆಗಳಿಗೆ ಇವತ್ತು ಜನ ಹೋಗುವುದಕ್ಕೆ ಹೆದರುತ್ತಿದ್ದಾರೆ.

ನಾವು ಪ್ರತಿ ಸಾರಿ ಒಂದು ಪೇಶೆಂಟ್‌ಗೆ ಫೋನ್ ಮಾಡಿ ಹೇಳಬೇಕು. ಸಂಬಂಧಪಟ್ಟ ಡಾಕ್ಟರ್‌ಗೆ ಹೇಳಿ ನಮ್ಮ ಕಾನ್‌ಸ್ಟುಯನ್ಸಿಯಿಂದ ಪತ್ರ ಬರೆದು ನಮ್ಮ ಕ್ಷೇತ್ರದ ರೋಗಿ ಬರುತ್ತಿದ್ದಾರೆ. ದಯವಿಟ್ಟು ನೋಡಿ ಎಂದು ಹೇಳಬೇಕು. ಇದು ಯಾವ ಹಣೆಬರಹ. ಇದಕ್ಕೋಸ್ಕರ ಆಸ್ಪತ್ರೆ ಮಾಡುವುದಾ? ದಯವಿಟ್ಟು ಸಚಿವರು ನಿರ್ದಾಕ್ಷಿಣ್ಯವಾಗಿ ನಗರದಲ್ಲಿ ಇರತಕ್ಕಂತಹ ಆಸ್ಪತ್ರೆಗಳಿಗೆ ಸಭೆ ಕರೆಯಿರಿ, ನಾವು ಬೆಂಗಳೂರು ಶಾಸಕರು ಜೊತೆ ಇರುತ್ತೇವೆ. ಈ ರೀತಿ ಎಲ್ಲೋ ಒಂದು ಕಡೆ ಪ್ರೈವೇಟ್ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ಮಾಡಿಕೊಂಡು ಈ ಆಸ್ಪತ್ರೆಯಲ್ಲಿ ಕೆಲಸ ಮಾಡುವ ವೈದ್ಯರಿಗೆ ಬೆಂಗಳೂರು ನಗರದಲ್ಲಿ ಉಳಿಸಬೇಡಿ. ಇವತ್ತು ನೆಫ್ರಾಲಜಿ ಕಿಡ್ನಿ ಪ್ರಾಬ್ಲಂ ಬಗ್ಗೆ ಹೇಳಬೇಕೆಂದರೆ, ಬೆಂಗಳೂರು ನಗರದಲ್ಲಿ ಕಿಡ್ನಿ ಫೌಂಡೇಷನ್ ಎಂದು ಹೋಗುತ್ತೇವೆ. ನಮ್ಮ ಆಸ್ಪತ್ರೆ ಇದ್ದುಕೊಂಡು ನಾವು ಬೇರೆ ಕಡೆ ಹೋಗಬೇಕು. ದಯಮಾಡಿ ಅದನ್ನು ಜಯದೇವ ಕಾರ್ಡಿಯಾಲಜಿ ಇದ್ದಂತಹ ಜಾಗದಲ್ಲಿ ಅದಷ್ಟು ಬೇಗ ಚಾಲನೆ ಕೊಡಿ. ಪ್ರತಿನಿತ್ಯ ಮುಖ್ಯ ಮಂತ್ರಿಗಳ ನಿಧಿ ಕೊಡಿಸಿ, ಮಹಾ ಪೌರರ ನಿಧಿ ಕೊಡಿಸಿ ಎಂದು ಜನ ಬರುತ್ತಾರೆ. ದಾನಿಗಳಿಂದ ಹಣ ಕೊಡಿಸಿ ಎಂದು ಜನ ಬರುತ್ತಾರೆ. ಇದು ಬಡವರ ಕಣ್ಣೀರು ಸುರಿಸುವಂಥದ್ದು. ದಯವಿಟ್ಟು ತಾವು ಸಚಿವರು ಇದನ್ನು ಅದಷ್ಟು ಬೇಗ ಚಾಲನೆ ಕೊಟ್ಟು ಅಲ್ಲಿರತಕ್ಕಂಥದ್ದು ಸಮರ್ಪಕ ನಿರ್ವಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇವೆ. ಮತ್ತು ಸೋಮಣ್ಣನವರು ಹೇಳಿದ ಹಾಗೆ ಸೂಪರ್ ವೈಸಿಂಗ್ ಕಮಿಟಿ ಅಥವಾ ಅಡ್ವೈಸರ್ ಕಮಿಟಿ ಬೇಕು; ಕಾನ್‌ಸ್ಟಿಟ್ಯೂಟ್ ಮಾಡಿ ನಗರದಲ್ಲಿ ಇರತಕ್ಕಂತಹ

ಏಕೈಕ ಆಸ್ಪತ್ರೆಗಳ ಬಗ್ಗೆ ನಾವು ತಿಳಿದುಕೊಳ್ಳಬೇಕು. ಡಾಕ್ಟರ್ ಇದ್ದಾರಾ ಎಂದು ಫೋನ್ ಮಾಡಿ ಕೇಳಿದರೆ ಹೇಳುವುದಿಲ್ಲ. ಯಾವ ಡಾಕ್ಟರ್ ಡ್ಯೂಟಿಯಲ್ಲಿದ್ದಾರೆಂದು ಕೇಳಿದರೆ ಸಮರ್ಪಕವಾದ ಉತ್ತರ ಕೊಡುವುದಿಲ್ಲ. ನೀವೇ ಸಪ್ರೈಸಾಗಿ ಯಾವಾಗಲಾದರೂ ರಾತ್ರಿ ಹೊತ್ತು ಫೋನ್ ಮಾಡಿ ನೋಡಿ. ಇದು ಬೆಂಗಳೂರು ನಗರದಲ್ಲಿ ಇರತಕ್ಕಂತಹ ಪ್ರಮುಖ ಆಸ್ಪತ್ರೆಗಳ ಚಿಂತಾಜನಕ ಸ್ಥಿತಿಯಾಗಿದೆ. ಚಿಕಿತ್ಸೆ ಕೊಡದೆ ಹೋದರೆ ಬಹಳ ಕಷ್ಟವಾಗುತ್ತದೆ ಎಂದು ಈ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಉಪಾಧ್ಯಕ್ಷರೆ, ಸೋಮಣ್ಣನವರು ಮತ್ತು ಮಹಾದೇವಪ್ಪನವರು, ಮಿತ್ರರಾದ ನರೇಂದ್ರ ಬಾಬುರವರು ಹೇಳಿದ ಪ್ರಕಾರ ವಿಕ್ಟೋರಿಯ ಆಸ್ಪತ್ರೆಯಲ್ಲಿ ಏನು ಹಗರಣಗಳು ನಡೆಯುತ್ತಿವೆ, ಅಲ್ಲಿ ರೋಗಿಗಳ ಬಗ್ಗೆ ಏನು ನಿರ್ಲಕ್ಷ್ಯ ನಡೆಯುತ್ತಿದೆ ಎಂದು ಈ ಸದನದಲ್ಲಿ ನನ್ನ ಗಮನಕ್ಕೆ ತಂದಿದ್ದಾರೆ. ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮ್ಮಿಶ್ರ ಸರ್ಕಾರ ಏನಿದೆ ಇದು ಕರ್ನಾಟಕ ರಾಜ್ಯದ ಬಡ ಜನತೆಗೋಸ್ಕರ ಈ ಸರ್ಕಾರ ಇದೆ. ಯಾವುದೇ ಕೆಲಸಗಳನ್ನು ನಾವು ಮಾಡಲಿ ನಾವು ನಿರ್ದಾಕ್ಷಿಣ್ಯವಾಗಿ ಮಾಡುತ್ತೇವೆ. ಪಾರದರ್ಶಕತೆ ಇರುತ್ತದೆ. ತಾವು ಹಿರಿಯರಿದ್ದೀರಿ, ಈಗಾಗಲೇ ಎಲ್ಲರೂ ಪ್ರಶ್ನೆ ಕೇಳಿದಿರಿ, ನಾನು ಹೊಸದಾಗಿ ಆಯ್ಕೆ ಆಗಿ ಬಂದಿರುತ್ತೇನೆ. ನಾವೆಲ್ಲ ಜೂನಿಯರ್ಸ್ ತಮಗೆ ನೋಡಿ ನಾವು ಕಲಿಯಬೇಕಾಗುತ್ತದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಅದಕ್ಕೆ ಈ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಮ್ಮ ಸೋಮಣ್ಣನವರು ಹೇಳಿದ ಪ್ರಕಾರ ಅಲ್ಲಿ ಬರ್ನಿಂಗ್ ವಾರ್ಡ್ಸ್ ಆಗಲಿ, ಅಥವಾ ಆಕ್ಸಿಡೆಂಟ್ ವಾರ್ಡ್‌ಗಳಿಗಾಗಲಿ ನೋಡುವುದಕ್ಕಾಗುವುದಿಲ್ಲ. ಅಂತಹ ಪರಿಸ್ಥಿತಿ ಇದೆ. ರೋಗಿಗಳಿಗೆ ಸರಿಯಾಗಿ ನೋಡುತ್ತಿಲ್ಲ. ನಮ್ಮ ನರೇಂದ್ರ ಬಾಬುರವರು ಹೇಳಿದ ಪ್ರಕಾರ ಪ್ರತಿಯೊಂದು ಪೆಶೆಂಟ್‌ಗೆ ಎಮ್.ಎಲ್.ಎಗಳು ಇಂಪ್ಲಿಯನ್ಸ್ ಹಚ್ಚಬೇಕು, ಫೋನ್ ಮಾಡಬೇಕು, ಇಂತಹ ಪರಿಸ್ಥಿತಿ ಇದ್ದರೆ ಇವತ್ತು ನಾನು ಸದನಕ್ಕೆ ತಿಳಿಸುತ್ತೇನೆ, ನಾವು ಯಾವ ಅಧಿಕಾರಿಗೆ ಬಗ್ಗುವುದಿಲ್ಲ. ಈ ಸರ್ಕಾರ ಏನೆಂದರೆ, ಯಾರಾದರೂ ಅಂತಹ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮುಖ್ಯವಾಗಿ ಈ ಸದನ ಮುಗಿದ ನಂತರ ತಾವೆಲ್ಲಾ ಏನು ಸಲಹೆ ಕೊಡುತ್ತೀರಿ. ಅದರ ಪ್ರಕಾರ ಮಾಡುತ್ತೇನೆ. ವೀಕ್ಷಣೆಗೆ ಹೋಗುತ್ತೇವೆ. ಸಪ್ರೈಸ್ ವಿಸಿಟ್ ನಾವು ಕೊಡುತ್ತೇವೆ. ಮತ್ತೆ ಪುನಃ ಆಸ್ಪತ್ರೆಗೆ ಸಪ್ರೈಸ್ ವಿಸಿಟ್ ಕೊಡುವ ಕಾಲಕ್ಕೆ ಬೆಂಗಳೂರಿನಲ್ಲಿ ಇರತಕ್ಕಂತಹ ಎಲ್ಲ ಎಮ್‌ಎಲ್‌ಎಗಳಿಗೆ ಕರೆದುಕೊಂಡು ಹೋಗುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಒಂದು ತಮ್ಮಲ್ಲಿ ನಾವು ಕಳಕಳಿಯಿಂದ ವಿನಂತಿ ಮಾಡುತ್ತೇವೆ. ಏನೆಂದರೆ, ನಿಮ್ಮ ವಿಚಾರಧಾರೆ ನಮಗೆ ಅರ್ಥವಾಯಿತು. ತಾವು ಒಪ್ಪಿಗೆ ಸೂಚಿಸಿದ್ದೀರಿ, ಅಲ್ಲಿ ಏನು ನಡೆಯುತ್ತಿದೆ, ನೋಡೋಣ ಎಂದು ಹೇಳಿದ್ದೀರಿ. ಅಂದ ಮೇಲೆ ಒಂದು ಸದನ ಸಮಿತಿ ಮಾಡಿ, ಸದನ ಸಮಿತಿ ಮಾಡಿದರೆ ಇಡೀ ಬೆಂಗಳೂರು ನಗರದಲ್ಲಿ ಇರತಕ್ಕಂತಹ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಭೇಟಿ ಮಾಡೋಣ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಉಪಾಧ್ಯಕ್ಷರೆ, ನಾವು ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದ ನಂತರ ಎಲ್ಲ ಎಮ್ಎಲ್ಎಗಳಿಗೂ ಕರೆದುಕೊಂಡು ಹೋಗುತ್ತೇವೆ. ಹೋದ ಮೇಲೆ ಬಹಳ ಗಂಭೀರತೆ ಇದ್ದರೆ ಆಗ ಸದನ ಸಮಿತಿ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕು ತೆಗೆದುಕೊಳ್ಳುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಬೆಂಗಳೂರು ನಗರದ ಶಾಸಕರಿಗೆ ಹಾಕಿ ಒಂದು ಸಮಿತಿ ಮಾಡಿ ಅವರು ಹೋಗಿ ಬರಲಿ, ನಮಗೆ ಬೇಡ. ಬೆಂಗಳೂರು ಸಿಟಿಯಲ್ಲಿ ಇರುವ ಶಾಸಕರುಗಳಿಗೆ ಹಾಕಿ ಒಂದು ಸಮಿತಿ ಮಾಡಿ ಅವರು ವರದಿ ಕೊಡಲಿ.

ಶ್ರೀ ನೆ.ಲ. ನರೇಂದ್ರಬಾಬು: ಸಮಿತಿ ವರದಿಗಿಂತ ನೇರವಾಗಿ ಹೋಗಿ ಆಸ್ಪತ್ರೆಗಳ ವಿಚಾರಗಳನ್ನು ತಿಳಿದುಕೊಳ್ಳಬಹುದು. ಸಮಿತಿ ವರದಿ ಬರುವವರೆಗೆ ನಮ್ಮ ಕಾಲಾವಧಿ ಮುಗಿದು ಹೋಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇಂಟರೆಸ್ಟೆಡ್ ಎಮ್ಎಲ್ಎ ಹಾಕಿ ಒಂದು ಸದನ ಸಮಿತಿ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್: ಬೋರ್ಡ್ ಆಫ್ ವಿಸಿಟರ್ಸ್ ಎಂದು ಮಾಡಲಿಕ್ಕೆ ಅವಕಾಶ ಇದೆ. ಪ್ರತಿಯೊಂದು ವಿಷಯಕ್ಕೆ ಸದನ ಸಮಿತಿ ಮಾಡಿದರೆ, ಸಂಪೂರ್ಣವಾದ ಪರಿಹಾರ ಸಿಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಸಮರ್ಥವಾಗಿ ಉತ್ತರ ಕೊಟ್ಟಿದ್ದಾರೆ. ಬೋರ್ಡ್ ಆಫ್ ವಿಸಿಟರ್ಸ್ ಮಾಡುತ್ತೇವೆ. ಬೋರ್ಡ್ ಆಫ್ ವಿಸಿಟರ್ಸ್ ಜೊತೆ ಇವರನ್ನೆಲ್ಲಾ ಕರೆದುಕೊಂಡು ಅಲ್ಲಿಗೆ ಹೋಗುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಇಲ್ಲಿಗೇ ಬಿಡುವುದು ಒಳ್ಳೆಯದು ಎಂದು ಕಾಣಿಸುತ್ತದೆ.

ಉಪಾಧ್ಯಕ್ಷರು: ತಡೆಹಿಡಿಯಲಾದ ಪ್ರಶ್ನೆಗಳು, ಕೃಷ್ಣ ಪಾಲೆಮಾರ್ ಅವರು ಇಲ್ಲ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 20ನೇ ಪಟ್ಟಿಯಲ್ಲಿರುವ 135 ಪ್ರಶ್ನೆಗಳ ಪೈಕಿ 120